# 16ರಿಂದ ಎನ್ಐಟಿಕೆಯಲ್ಲಿ ಇನ್ಸಿಡೆಂಟ್ 2023

**ಮಂಗಳೂರು:** ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್ಐಟಿಕೆ)ಯ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ 2023' ಮಾ.16ರಿಂದ 19 ರವರೆಗೆ ಎನ್ಐಟಿಕೆಯಲ್ಲಿ ನಡೆಯಲಿದೆ ಎಂದು ಮಂಗಳವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಎನ್ಐಟಿಕೆ ವಿದ್ಯಾರ್ಥಿ ಕ್ಷೇಮಪಾಲನಾ ಡೀನ್ ಪ್ರೊ. ನರೇಂದ್ರನಾಥ್ ಮಾಹಿತಿ ನೀಡಿದರು. ಸಿನೆಮಾ ನಟ ಪ್ರಕಾಶ್ ಬೆಳವಾಡಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ತುಳಸಿ ಗೌಡ ಭಾಗವಹಿಸುವರು. ಎನ್ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ. ಪ್ರಸಾದ್ ಕೃಷ್ಣ ಅಧ್ಯಕ್ಷತೆ ವಹಿಸುವರು ಎಂದರು.

Vijaya Karnataka, Date: 15/03/23 p, no- 05